## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ 2017–18ನೇ ಸಾಲಿನ ಪ್ರಥಮ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:** (1) ಸರ್ಕಾರಿ ಆದೇಶ ಸಂಖ್ಯೆ:ಪಿಡಿ 32 ಎಸ್ಎಸ್ಎಂ 2017, ದಿನಾಂಕ:07.04.2017
(2) ಸರ್ಕಾರಿ ಆದೇಶ ಸಂಖ್ಯೆ:ಆಇ 346 ವೆಚ್ಚ:6/2017, ದಿನಾಂಕ:14.06.2017.
(3) ಕಾರ್ಯದರ್ಶಿ, ಕರಾವಳಿ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು ಇವರ ಪತ್ರ ಸಂಖ್ಯೆ:ಕಾ/ಕ.ಅ.ಪ್ರಾ/ಮಂ/2017–18/62, ದಿನಾಂಕ:30.06.2017.

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು 2017–18ನೇ ಸಾಲಿನಲ್ಲಿ ಮುಂದುವರಿಸಲಾಗಿದೆ. 2017–18ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ 4217–01–800–0–04–132 ಅಡಿ ಒದಗಿಸಲಾಗಿದ್ದ ಒಟ್ಟು ರೂ.1968.00 ಲಕ್ಷಗಳಲ್ಲಿ ಮೇಲೆ (2) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರೂ.85.00 ಲಕ್ಷಗಳನ್ನು ಅಧ್ಯರ್ಪಣೆ ಮಾಡಲಾಗಿದೆ. ಲೆಕ್ಕಶೀರ್ಷಿಕೆ 2217–80–001–1–06–059 (ಇತರೆ ವೆಚ್ಚಗಳು) ಅಡಿಯಲ್ಲಿ ಪೂರಕ ಅಂದಾಜು–1 ರಲ್ಲಿ ರೂ.85.00 ಲಕ್ಷಗಳನ್ನು ಹೆಚ್ಚುವರಿಯಾಗಿ ಒದಗಿಸಲಾಗಿದೆ. ಅದರನ್ವಯ 2017–18ನೇ ಸಾಲಿನಲ್ಲಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು ಇದಕ್ಕೆ ಈ ಕೆಳಕಂಡಂತೆ ಒಟ್ಟು ರೂ.2000.00 ಲಕ್ಷಗಳನ್ನು ಒದಗಿಸಲಾಗಿದೆ:–

| ಲೆಕ್ಕಶೀರ್ಷಿಕೆ | ರೂ.ಲಕ್ಷಗಳಲ್ಲಿ |
|---|---|
| 2217–80–001–1–06–002 (ಅಧಿಕಾರಿಗಳ ವೇತನ) | 15.00 |
| 2217–80–001–1–06–011 (ತುಟ್ಟಿಭತ್ಯೆ) | 8.00 |
| 2217–80–001–1–06–014 (ಇತರೆ ಭತ್ಯೆ) | 4.00 |
| 2217–80–001–1–06–021 (ವೈದ್ಯಕೀಯ ವೆಚ್ಚ ಮರುಪಾವತಿ) | 3.00 |
| 2217–80–001–1–06–041 (ಪ್ರಯಾಣ ವೆಚ್ಚಗಳು) | 2.00 |
| 2217–80–001–1–06–059(ಇತರೆ ವೆಚ್ಚಗಳು) | 85.00 |
| 4217–01–800–0–04–132 (ಬಂಡವಾಳ ವೆಚ್ಚಗಳು) | 1883.00 |
| ಒಟ್ಟು | **2000.00** |

ಮೇಲೆ (3) ರಲ್ಲಿ ಓದಲಾದ ಪತ್ರದಲ್ಲಿ ಕಾರ್ಯದರ್ಶಿ, ಕರಾವಳಿ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು ಇವರು 2017–18ನೇ ಸಾಲಿನಲ್ಲಿ ಸರ್ಕಾರದಿಂದ ಇದುವರೆಗೂ ಪ್ರಥಮ ಕಂತಿನ ಅನುದಾನವನ್ನು ಬಿಡುಗಡೆ ಮಾಡದೇ ಇರುವುದರಿಂದ, ಪ್ರಾಧಿಕಾರದ ಅಧ್ಯಕ್ಷರ ವೇತನ/ಭತ್ಯೆ, ಪ್ರಾಧಿಕಾರದ ಅಧಿಕಾರ ವೇತನ/ಭತ್ಯೆ, ಹೊರಗುತ್ತಿಗೆ ನೌಕರರ ಸಂಬಳ ಪಾವತಿ ಹಾಗೂ ದೈನಂದಿನ ಕಚೇರಿ ಕೆಲಸಗಳ ನಿರ್ವಹಣೆಗೆ ಅನುದಾನವಿಲ್ಲದೇ ಕಷ್ಟಕರವಾಗಿರುತ್ತದೆ. ಹಾಗೆಯೇ 2016–17ನೇ ಸಾಲಿನಲ್ಲಿ ಅನುಷ್ಠಾನಗೊಂಡಿರುವ ಕಾಮಗಾರಿಗಳಲ್ಲಿ ಕೆಲವು ಕಾಮಗಾರಿಗಳಿಗೆ 2ನೇ ಕಂತಿನ ಮೊಬಲಗು ಪಾವತಿಸಲು ಬಾಕಿಯಾಗಿದು, ಈ ಕಾಮಗಾರಿಗಳು ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಬಾಕಿ ಮೊತ್ತವನ್ನು ಪಾವತಿಸುವ ಅಗತ್ಯತೆ ಇರುತ್ತದೆ. ಆದುದರಿಂದ, 2017–18ನೇ ಸಾಲಿನ ಪ್ರಥಮ ಕಂತಿನ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಪ್ರಥಮ ಕಂತಿನ ಅನುದಾನವೆಂದು ರೂ.500.00 ಲಕ್ಷಗಳನ್ನು ಬಿಡುಗಡೆ ಮಾಡಲು ಉದ್ದೇಶಿಸಿದೆ. ಅದರಂತೆ ಈ ಆದೇಶ.

---2

**ಸರ್ಕಾರಿ ಆದೇಶ ಸಂಖ್ಯೆ:ಯೋಇ 62 ಪಿಟಿಪಿ 2017, ಬೆಂಗಳೂರು, ದಿನಾಂಕ:13.07.2017**

ಕರಾವಳಿ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು ಇದಕ್ಕೆ 2017-18ನೇ ಸಾಲಿನ ಪ್ರಥಮ ಕಂತಿನ ಅನುದಾನ ರೂ.500.00 ಲಕ್ಷ (ಐದು ಕೋಟಿ ರೂಪಾಯಿಗಳು ಮಾತ್ರ) ಗಳನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಗಳಡಿ ಬಿಡುಗಡೆ ಮಾಡಿದೆ-

| ಲೆಕ್ಕಶೀರ್ಷಿಕೆ | ರೂ.ಲಕ್ಷಗಳಲ್ಲಿ |
|---|---|
| 2217-80-001-1-06-002 (ಅಧಿಕಾರಿಗಳ ವೇತನ) | 3.75 |
| 2217-80-001-1-06-011 (ತುಟ್ಟಿಭತ್ಯೆ) | 2.00 |
| 2217-80-001-1-06-014 (ಇತರೆ ಭತ್ಯೆ) | 1.00 |
| 2217-80-001-1-06-021 (ವೈದ್ಯಕೀಯ ವೆಚ್ಚ ಮರುಪಾವತಿ) | 0.75 |
| 2217-80-001-1-06-041 (ಪ್ರಯಾಣ ವೆಚ್ಚಗಳು) | 0.50 |
| 2217-80-001-1-06-059 (ಇತರೆ ವೆಚ್ಚಗಳು) | 21.25 |
| 4217-01-800-0-04-132 (ಬಂಡವಾಳ ವೆಚ್ಚಗಳು) | 470.75 |
| **ಒಟ್ಟು** | **500.00** |

ಬಿಡುಗಡೆಯಾದ ಈ ಅನುದಾನವನ್ನು ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ತೆರೆಯಲಾಗಿರುವ ಖಾತೆಯಲಿಟ್ಟುಕೊಂಡು ಅಗತ್ಯತೆಗೆ ಅನುಗುಣವಾಗಿ ಖರ್ಚು ಮಾಡತಕ್ಕದ್ದು.

ಬಿಡುಗಡೆಯಾದ ಈ ಅನುದಾನವನ್ನು 2017-18ನೇ ಸಾಲಿನಲ್ಲಿ ಅನುಮೋದನೆಯಾದ ಕ್ರಿಯಾ ಯೋಜನೆಯಲ್ಲಿನ ಕಾಮಗಾರಿಗಳಿಗೆ ಮಾತ್ರ ವೆಚ್ಚ ಭರಿಸಿ ನಿಯಮಾನುಸಾರ ಹಣ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸುವುದು ಮತ್ತು ಪ್ರತಿ ಮಾಹೆ ಆರ್ಥಿಕ ಮತ್ತು ಭೌತಿಕ ಪ್ರಗತಿ ಹಾಗೂ ಎಂಪಿಕ್ ವರದಿಯನ್ನು ತಪ್ಪದೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಆಇ 01 ಟಿಎಫ್‌ಪಿ 2017, ದಿನಾಂಕ:05.04.2017 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಲಾಗಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

13/7/17

**(ಹೆಚ್.ಸಿ.ಹರ್ಷರಾಣಿ)**
ಸರ್ಕಾರದ ಅಧೀನ ಕಾರ್ಯದರ್ಶಿ(ಎಸ್-5)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

13/7

***ಇವರಿಗೆ:***

1. ಪ್ರಧಾನ ಮಹಾಲೇಖಪಾಲರು(ಜಿ&ಎಸ್‌ಎಸ್‌ಎ)/(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ ಆಡಿಟ್ ಭವನ ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು.